ಬಾಲಿವುಡ್

# ಶಿಲ್ಪಾ ಸಾಹಸ



ಅಮೆರಿಕದಲ್ಲಿ ಸೆಟ್ಲ್ ಆಗಿದ್ದ ಗಂಡ ಡಾಕ್ಟರ್ ಶ್ರೀರಾಮ ನೆನೆಯನ್ನು ಮುಂಬೈಗೆ ಎಳೆತಂದ ಮಾಧುರಿ ದೀಕ್ಷಿತ್ ಈಗ ಆತನನ್ನು ಸಿನಿಮಾ ನಿರ್ಮಾಣಕ್ಕೆ ಇಳಿಸುತ್ತಿದ್ದಾಳೆಂಬ ಸುದ್ದಿ ಹಳೇದು. ಇದೀಗ ಶಿಲ್ಪಾ ಶೆಟ್ಟಿ ಕೂಡಾ ಗಂಡ ರಾಜ್ ಕುಂದ್ರಾನನ್ನು ಸಿನಿಮಾ ನಿರ್ಮಾಣಕ್ಕೆ ಮಾತ್ರವಲ್ಲ ನಟನೆಗೂ ಇಳಿಸಿದ್ದಾಳೆ ಎನ್ನೋದು ಹೊಸ ಸುದ್ದಿ. ಸಿನಿಮಾ ರೌಂಡ್, ಕ್ರಿಕೆಟ್ ರೌಂಡ್‌ಗಳನ್ನೆಲ್ಲ ಮುಗಿಸಿ ಸದ್ಯಕ್ಕೆ ಹೆರಿಗೆ ರಜಾ ಅನುಭವಿಸುತ್ತಿರುವ ಶಿಲ್ಪಾ ಶೆಟ್ಟಿ, ಇನ್ನೇನು ಸ್ವತಃ ಅಭಿನಯಕ್ಕೂ ಮರಳುವ ಸುದ್ದಿಯೂ ಇದೆ. ಆದರೆ ಅದಕ್ಕೂ ಮುನ್ನವೇ ಶಿಲ್ಪಾ ಪತಿ, ಲಂಡನ್ನಿನ ಉದ್ಯಮಿ ರಾಜ್ ಕುಂದ್ರಾ ಸಿನಿಮಾ ನಿರ್ಮಾಣದ ಸುದ್ದಿ ಬಹಿರಂಗಗೊಂಡಿದೆ.

ಹಾಲಿವುಡ್‌ನಲ್ಲಿ ಸೂಪರ್‌ಹಿಟ್ ಆದ 'ವಾರಿಯರ್' ಎಂಬ ಸಿನಿಮಾ ಕಥೆಯ ಜಾಡಿನಲ್ಲೇ ಹಿಂದಿ ಚಿತ್ರಕಥೆಯೊಂದನ್ನು ರಾಜ್ ಕುಂದ್ರಾ ಈಗಾಗಲೆ ಆಯ್ಕೆ ಮಾಡಿದ್ದಾರಂತೆ. ಕಥೆ ಬರೆಯಲು ಹಾಲಿವುಡ್‌ನಿಂದಲೇ ಲೇಖಕರನ್ನೂ ಆಮದು ಮಾಡಿಕೊಳ್ಳಲಾಗಿದೆಯಂತೆ. ಹಾಗೆ ನೋಡಿದರೆ ಇದು ರಾಜ್ ಕುಂದ್ರಾರ ಮೊದಲ ಸಿನಿಮಾ ಏನಲ್ಲ. ಡಿಶ್ಕಿಯೂಂ ಎಂಬ ಟೈಟಲ್‌ನ ಇನ್ನೊಂದು ಸಿನಿಮಾ ನಿರ್ಮಾಣವನ್ನು ರಾಜ್ ಈ ವರ್ಷದ ಆರಂಭದಲ್ಲೇ ಘೋಷಿಸಿದ್ದರು. ಆದರೆ ಹಣ ಹಾಕಿದ್ದು ಬಿಟ್ಟರೆ ಬೇರೆ ಪಾತ್ರವಿರಲಿಲ್ಲ. ಈಗ ಕೈಗೆತ್ತಿಕೊಂಡಿರುವ ಹೊಸ ಚಿತ್ರದಲ್ಲಿ ರಾಜ್ ತೆರೆಯ ಮೇಲೆ ಕೂಡಾ ಕಾಣಿಸುತ್ತಿರುವುದು ವಿಶೇಷ.

ಸಿನಿಮಾದಲ್ಲಿ ರಾಜ್ ಕುಂದ್ರಾ ಜತೆಗೆ ಸಂಜಯ್ ದತ್ ಇರೋದು ಖಚಿತವಾಗಿದೆ. ಇನ್ನೊಂದು ಮುಖ್ಯ ಪಾತ್ರಕ್ಕೆ ಜಾನ್ ಅಬ್ರಹಾಂ ಜತೆ ಮಾತುಕತೆ ನಡೆದಿದೆಯಂತೆ. ಭರ್ಜರಿ ಆ್ಯಕ್ಷನ್‌ಗಳಿರುವ ಹಾಗೂ ಕಾಮಿಡಿಯೂ ಇರುವ ಚಿತ್ರದ ಶೂಟಿಂಗ್ ಜನವರಿಯಲ್ಲಿ ಆರಂಭವಾಗಬಹುದು ಎಂದು ಸ್ವತಃ ಕುಂದ್ರಾ ಮಾಧ್ಯಮದವರಿಗೆ ತಿಳಿಸಿದ್ದಾನೆ. ಒಟ್ನಾರೆ ಲಂಡನ್ನಿನಲ್ಲಿ ಉದ್ಯಮ ಮಾಡಿಕೊಂಡು ಹಾಯಾಗಿದ್ದ ಕುಂದ್ರಾನನ್ನು ಮುಂಬೈಗೆ ಎಳೆತಂದಿದ್ದೇ ಅಲ್ಲದೆ, ಸಿನಿಮಾದಲ್ಲಿ ಬಣ್ಣ ಹಚ್ಚಲೂ ತೊಡಗಿಸಿರುವುದು ಶಿಲ್ಪಾಳ ಸಾಹಸವೇ ಸರಿ.

■ ಬಿಂದು

